## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 192 (238) |
| ಸದಸ್ಯರ ಹೆಸರು: | ಶ್ರೀ ಮಧು ಜಿ. ಮಾದೇಗೌಡ |
| ಉತ್ತರಿಸುವ ಸಚಿವರು: | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |
| ಉತ್ತರಿಸುವ ದಿನಾಂಕ: | 06.07.2023. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ವಿವಿಧ ಇಲಾಖೆಗಳು / ಸಂಸ್ಥೆಗಳ ವಿರುದ್ಧ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಕಳೆದ 03 ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು, ಇಲಾಖಾವಾರು ಮಾಹಿತಿ ನೀಡುವುದು)? | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿಗೆ ಸಂಬಂಧಿಸಿದಂತೆ, ರಾಜ್ಯ ಪ್ರಾಧಿಕಾರದಲ್ಲಿ ಕಳೆದ 03 ವರ್ಷಗಳಲ್ಲಿ 02 ಪ್ರಕರಣಗಳು ದಾಖಲಾಗಿರುತ್ತವೆ.<br>1. ರಿಟ್ ಪಿಟಿಷನ್ ಸಂಖ್ಯೆ: 12862/2022.<br>2. ರಿಟ್ ಪಿಟಿಷನ್ ಸಂಖ್ಯೆ: 18297/2022. |
| ಆ) | ಈ ಪೈಕಿ ಮುಕ್ತಾಯಗೊಂಡ, ವಿಚಾರಣಾ ಹಂತದಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು; | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿಗೆ ಸಂಬಂಧಿಸಿದಂತೆ,ಈ ಪೈಕಿ 02 ಪ್ರಕರಣಗಳು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತವೆ. |
| ಇ) | ಸರ್ಕಾರದ ವಿವಿಧ ಇಲಾಖೆಗಳು / ಸಂಸ್ಥೆಗಳ ವಿರುದ್ಧವಾಗಿ ದಾಖಲಾಗುವ ಪ್ರಕರಣಗಳ ಪರವಾಗಿ ವಾದಿಸಲು ನ್ಯಾಯವಾದಿಗಳನ್ನು ನೇಮಿಸಿಕೊಳ್ಳಲು ಇರುವ ಮಾನದಂಡಗಳೇನು; | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿಗೆ ಸಂಬಂಧಿಸಿದಂತೆ, ರಾಜ್ಯ ಪ್ರಾಧಿಕಾರದಲ್ಲಿ ಫ್ಯಾನಲ್ ವಕೀಲರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.<br>**(ಅನುಬಂಧ -1)** |
| ಈ) | ಸರ್ಕಾರದ ವಿವಿಧ ಇಲಾಖೆಗಳು / ಸಂಸ್ಥೆಗಳ ಪರವಾಗಿ ವಾದಿಸಲು ನೇಮಿಸಿಕೊಳ್ಳಲಾದ ನ್ಯಾಯವಾದಿಗಳಿಗೆ ಪ್ರತಿ ಪ್ರಕರಣಕ್ಕೆ ನೀಡಬೇಕಾದ ಗೌರವಧನ ಎಷ್ಟು; (ಪ್ರಸ್ತುತ ಚಾಲ್ತಿಯಲ್ಲಿರುವ ದರ ಆದೇಶದ ಪ್ರತಿ ನೀಡುವುದು) | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿಗೆ ಸಂಬಂಧಿಸಿದಂತೆ, ಕಾನೂನು ಇಲಾಖೆಯಿಂದ ಹೊರಡಿಸಿರುವ ಆದೇಶ ಸಂಖ್ಯೆ: ಲಾ 21 ಎಲ್‌ಎಡಿ 2017, ದಿನಾಂಕ: 25.09.2017ರ ಆದೇಶವನ್ನು ಲಗತ್ತಿಸಿದೆ.<br>**(ಅನುಬಂಧ-2)** |
| ಉ) | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬಡಜನರಿಗೆ ಹಾಗೂ ಕಾರಾಗೃಹದಲ್ಲಿ ವಿಚಾರಾಣಾಧೀನ ಬಂಧಿಗಳಾಗಿರುವ ಎಷ್ಟು ಮಂದಿಗೆ ಕಾನೂನು ನೆರವು / ಸಲಹೆಯನ್ನು ಒದಗಿಸಲಾಗಿದೆ ? | **(ಅನುಬಂಧ -3)** |

**ಕಡತ ಸಂಖ್ಯೆ: ಲಾ-ಎಲ್‌ಎಡಿ/261/2023**

**(ಎಚ್. ಕೆ. ಪಾಟೀಲ)**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ
ಸಚಿವರು

" ಅನುಬಂಧ - 1 "

# THE NATIONAL LEGAL SERVICES AUTHORITY (FREE AND COMPETENT LEGAL SERVICES) REGULATIONS, 2010

**(As amended vide notification F.No. L/61/10/NALSA dated 28.08.2019 and Addendum dated 18.9.2019 published in the Gazette of India on 06.09.2019 and 19.9.2019 respectively)**

*- In exercise of the powers conferred by section 29 of the Legal Services Authorities Act, 1987 (39 of 1987) and in pursuance of the provisions in section 4 of the Act to make available free and competent legal services to the persons entitled thereto under section 12 of the said Act, the Central Authority hereby makes the following regulations, namely: -*

**1. Short title, extent and commencement.** – (1) These regulations may be called the National Legal Services Authority (Free and Competent Legal Services) Regulations, 2010.

(2) They shall be applicable to Supreme Court Legal Services Committee, State Legal Services Authorities, High Court Legal Services Committees, District Legal Services Authorities, and Taluk Legal Services Committees in India.

(3) They shall come into force from the date of their publication in the Official Gazette.

**2. Definitions.** – (1) In these regulations, unless the context otherwise requires, -

(a) "Act" means the Legal Services Authorities Act, 1987 (39 of 1987);

(b) "Form" means a Form annexed to these Regulations;

(c) "Front Office" means a room in the Legal Services Institution where legal services are made available;

(d) "Legal Practitioner" shall have the meaning assigned to it in clause (i) of section 2 of the Advocates Act, 1961 (25 of 1961);

(e) "Legal Services Institution" means the Supreme Court Legal Services Committee, a State Legal Services Authority, the High Court Legal Services Committee, District Legal Services Authority or the Taluk Legal Services Committee, as the case may be;

[1](ea) "Monitoring and Mentoring Committee" means the Committees set up under regulation 10;

(eb) "Panel Lawyer" means a legal practitioner empanelled as a Panel lawyer under regulation 8;

(f) "Para-Legal Volunteer" means a para-legal volunteer trained [2]under the 'National Legal Services Authority Scheme for Para Legal Volunteers' and empanelled by a Legal Services Institution;

---

[1] Substituted vide notification dated 22/10/2018, published in the Gazette of India on 25/10/2018.

[2] Inserted vide notification dated 22/10/2018, published in the Gazette of India on 25/10/2018.

Provided further that in case of the Supreme Court Legal Services Committee, the Secretary shall seek opinion from an Advocate having more than fifteen years standing at the Bar.

(2) A decision on application for legal services shall be taken immediately, but not more than seven days from the date of receipt of the application.

(3) If the applicant is not covered under the categories mentioned in section 12, he or she shall be advised to seek assistance from any other body or person rendering free legal services either voluntarily or under any other scheme.

(4) The Legal Services Institution shall maintain a list of such agencies, institutions or persons who have expressed willingness to render free legal services.

(5) Any person aggrieved by the decision or order of the Member-Secretary or the Secretary, as the case may be, he may prefer appeal to the Executive Chairman or Chairman of the Legal Services Institution and the decision or order in appeal shall be final.

(6) In case the Member-Secretary or Secretary of the Legal Services Institution decides to provide legal services through a panel lawyer, the choice of the panel lawyer, if expressed by the applicant, may be considered.

[15]**8. Selection of legal practitioners as panel lawyers.** – (1) Every Legal Services Institution shall invite applications from legal practitioners for their empanelment as panel lawyers and such applications shall be accompanied with proof of the professional experience with special reference to the type of cases which the applicant-legal practitioners may prefer to be entrusted with.

(2) The applications received under sub-regulation (1) shall be scrutinised and selection of the panel lawyers shall be made by the Executive Chairman or Chairman of the Legal Services Institution in consultation with the Attorney General [for the Supreme Court], Advocate General [for the High Court], District Attorney or Government Pleader [for District and Taluka level] and the Monitoring and Mentoring Committee set up under regulation 10:

Provided that the Executive Chairman or Chairman of the Legal Services Institution may also suo moto empanel any legal practitioner;

[16]Provided further that the size of panel should be optimised so that each lawyer can be allotted sufficient cases.

(3) No legal practitioner having less than three years' experience at the Bar shall ordinarily be empanelled.

---

[15] Substituted vide notification dated 22/10/2018, published in the Gazette of India on 25/10/2018.

[16] Inserted vide notification dated 28/08/2019, published in the Gazette of India on 06/09/2019.

"ಅನುಬಂಧ - 2"

11,937

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ : ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವು ಅಳವಡಿಸಿಕೊಂಡಿರುವ ವಕೀಲರ ಶುಲ್ಕದ ರೀತಿಯಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಡಿ ಕಾರ್ಯನಿರ್ವಹಿಸುತ್ತಿರುವ ವಕೀಲರ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಲಾ 52 ಎಲ್‌ಎಡಿ 2013, ದಿ:22-11-2013
2. ಸದಸ್ಯ ಕಾರ್ಯದರ್ಶಿ, ರಾಜ್ಯ ಕಾನೂನು ಸೇವಾ ಪ್ರಾಧಿಕಾರ ರವರ ಪತ್ರ ಸಂಖ್ಯೆ: ಕರಾಸೇಪ್ರಾ:2:ಎಡಿಎಂ:2009, ದಿ:14-11-2016 ಹಾಗೂ ದಿ:19-04-2017.

*******

<u>ಪ್ರಸ್ತಾವನೆ:</u>

ಮೇಲೆ ಓದಲಾದ(1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಪ್ಯಾನೆಲ್ ವಕೀಲರ ಶುಲ್ಕವನ್ನು ಹೆಚ್ಚಿಸಲಾಗಿರುತ್ತದೆ. ಹಾಗೂ ಈ ಸಂಬಂಧಿಸಿದಂತೆ, The Legal Services Act, 1987ರ ಸೆಕ್ಷನ್ 29ಂ ರಲ್ಲಿ ಪ್ರದತ್ತವಾದ ಅಧಿಕಾರದನ್ವಯ Karnataka State Legal Services Authority Regulations, 1997ರ ಷೆಡ್ಯೂಲ್ 1 ಮತ್ತು ಷೆಡ್ಯೂಲ್ 2 ಗಳನ್ನು ತಿದ್ದುಪಡಿ ಮಾಡಿಕೊಳ್ಳುವಂತೆ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ ರವರಿಗೆ ನಿರ್ದೇಶಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಪತ್ರ ದಿನಾಂಕ:14-11-2016ರ ಪತ್ರದಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ರವರು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ 14ನೇ ಅಖಿಲ ಭಾರತ ಸಭೆಯಲ್ಲಿ ವಿಷಯ ಸಂಖ್ಯೆ03 ರಡಿಯಲ್ಲಿ ಪ್ಯಾನೆಲ್ ವಕೀಲರುಗಳಿಗೆ ಶುಲ್ಕ ಪಾವತಿಯ ಬಗ್ಗೆ ಪರಿಗಣಿಸಲು ರಚಿಸಲಾದ ಸಮಿತಿಯು ಸಲ್ಲಿಸಿದ್ದ ವರದಿಯು ಪರಿಶೀಲಿಸಿರುವುದೆಂದು, ಸದರಿ ಸಮಿತಿಯಲ್ಲಿ ವಕೀಲರುಗಳಿಗೆ ಉಚ್ಛ ನ್ಯಾಯಾಲಯ ಹಾಗೂ ಕೆಳಹಂತದ ನ್ಯಾಯಾಲಯಗಳ ಮುಂದೆ ಮಂಡಿಸಲಾಗುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಕನಿಷ್ಠ ಶುಲ್ಕ ಪಾವತಿಸುವ ಬಗ್ಗೆ ತೆಗೆದುಕೊಳ್ಳಲಾದ ನಿರ್ಣಯವನ್ನು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವು ಅಳವಡಿಸಿಕೊಳ್ಳಲು ತೀರ್ಮಾನಿಸಿರುತ್ತದೆ. ಎಂದೂ ಅದರಂತೆ ಇತರೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು ಸಹ ಈ ನಿರ್ಣಯವನ್ನು ಅಳವಡಿಸಿಕೊಳ್ಳಬಹುದೆಂದು ತಿಳಿಸಲಾದ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ದಿನಾಂಕ 29/04/2016ರಂದು ನಡೆದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ರಾಜ್ಯ ಕಾನೂನು ಸೇವೆಗಳ ಪ್ಯಾನೆಲ್ ಅಡ್ವೋಕೇಟ್‌ಗಳಿಗೆ ರಾಷ್ಟ್ರೀಯ ಕಾನೂನು ಸೇವೆಗಳ

ಪ್ರಾಧಿಕಾರದವರು ಪ್ರಸ್ತಾಪಿರುವ ಕನಿಷ್ಠ ಶುಲ್ಕ ರಚನೆಯನ್ನು ಅಳವಡಿಸಿಕೊಳ್ಳಲು ಹಾಗೂ ಈ ಸಂಬಂದಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಗಿರುತ್ತದೆಯೆಂದೂ ಹಾಗೂ ಅದರಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಸುತ್ತಾ ಈ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2) ರ ಸರ್ಕಾರದ ಆದೇಶದಲ್ಲಿ ನಿರ್ದೇಶಿಸಿರುವಂತೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಇದುವರೆಗೂ ಸದರಿ ಆದೇಶದಲ್ಲಿ ಹೆಚ್ಚಿಸಲಾಗಿರುವ ವಕೀಲರ ಶುಲ್ಕವನ್ನು ಅಳವಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ Karnataka State Legal Services Authority Regulations, 1997 Schedule-I and Schedule-II ರ ತಿದ್ದುಪಡಿ ಮಾಡಿರುವುದಿಲ್ಲ. ಹಾಗೂ ಮೇಲೆ ಓದಲಾದ(3) ರಲ್ಲಿ ದಿನಾಂಕ:19-04-2017ರ ಪತ್ರದಲ್ಲಿ ಸದರಿ ಪ್ರಸ್ತಾಪಿಸಿರುವ ತಿದ್ದುಪಡಿ ಮಾಡುವ ಸಮಯದಲ್ಲಿ ಅದನ್ನು ಸಹ ಅಳವಡಿಸಲಾಗುವುದು ಎಂದು ತಿಳಿಸಿರುತ್ತಾರೆ. ಹಾಗೂ ಈ ಬಗ್ಗೆ ತಗಲುವ ವೆಚ್ಚವನ್ನು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಅನುದಾನದಿಂದ ಭರಿಸಲಾಗುವುದೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಲಾ 21 ಎಲ್‌ಎಡಿ 2017, ಬೆಂಗಳೂರು, ದಿನಾಂಕ: 25.09.2017**

ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಅಳವಡಿಸಿಕೊಂಡಿರುವ ವಕೀಲರ ಶುಲ್ಕದ ರೀತಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಡಿ ಕಾರ್ಯನಿರ್ವಹಿಸುತ್ತಿರುವ ವಕೀಲರ ಶುಲ್ಕವನ್ನು ಈ ಕೆಳಕಂಡಂತೆ ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ:

*"A. High Court*

*I. Drafting of substantive pleading such as Writ Petition, Counter Affidavit, Memo of Appeal, Revision, Reply, Rejoinder, Replication – Rs.1,500/-*

*II. Drafting of Miscellaneous applications such as stay, bail, direction, exemption etc. Rs.500/- per application subject to maximum of Rs.1,000/- for all applications.*

*III. Appearance – Rs.1,000/- per effective hearing and Rs.750/- for non-effective hearing subject to maximum of Rs.10,000/- (per case).*

*B. Subordinate Courts at all levels including Tribunals*

I. *Drafting of substative pleading such as suit, Matrimonial Proceedings such as Divorce, Maintance, Custody, Restitution etc., Succession, Probate, Memo of Appeal, Revision, Written Statement, Reply, Rejoinder, Replication etc. – Rs.1,200/-*

II. *Drafting of miscellaneous applications such as stay, bail, direction, exemption etc. – Rs.400/- per application subject to maximum of Rs.800/- for all applications.*

III. *Appearance – Rs.750/- per effective hearing and Rs.500/- for non effective hearing subject to a maximum of Rs.7,500/- (per case)*

ಸರ್ಕಾರದ ಆದೇಶ ಸಂಖ್ಯೆ: ಲಾ 52 ಎಲ್ಎಡಿ 2013, 22-11-2013 ಹಾಗೂ ಪ್ರಸ್ತುತ ಆದೇಶದನ್ವಯ ಹೆಚ್ಚಿಸಲಾದ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ವಕೀಲರ ಶುಲ್ಕವನ್ನು ಅಳವಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ 1987 ರ ಸೆಕ್ಷನ್ 29 A ರನ್ವಯ Karnataka State Legal Services Authority Regulations, 1997 Schedule-I and Schedule-II ರಲ್ಲಿ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು. ಹಾಗೂ ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ, 1987 ರ ಸೆಕ್ಷನ್ 30 (2) ರನ್ವಯ ಸರ್ಕಾರಕ್ಕೆ ಈ ಸಂಬಂಧಿಸಿದಂತೆ ಅನುಪಾಲನಾ ವರದಿಯನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ರವರ ಟಿಪ್ಪಣಿ ಸಂಖ್ಯೆ:4853, ದಿ:14-09-2017 ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/9/17
(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕಾನೂನು ಇಲಾಖೆ (ಆಡಳಿತ-2).

<u>ಇವರಿಗೆ:</u>

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು. (ಇವರಿಗೆ ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು ಅದರ 200 ಪ್ರತಿಗಳನ್ನು ಒದಗಿಸುವ ಸಲುವಾಗಿ)

# Annexture-3

## KARNATAKA STATE LEGAL SERVICES AUTHORITY, BENGALURU.

Statistical information about legal aid and legal advice given to prisoners (UTP's & Convicts) by the panel Advocates

(As on 31.05.2023)

| Legal Advice | Legal Aid | | |
|---|---|---|---|
| **No. of advice given to UTP's and Convicts by DLSAs** | **No. of Legal Aid given to UTP's by DLSAs** | **No. of Legal Aid given to Convicts by DLSAs** | **No. of Legal Aid given to Convicts by HCLSCs** |
| 2020 – 7,917<br>2021 – 10,275<br>2022 – 16,805<br>2023 – 6,992 | 2020 – 1,286<br>2021 – 1,755<br>2022 – 2,214<br>2023 – 1,444 | 2020 – 4<br>2021 – 18<br>2022 – 16<br>2023 - 20 | `2020 – 98<br>2021 – 91<br>2022 – 86<br>2023 - 70 |
| **41,989** | **6,699** | **58** | **345** |
| | **7102** | | |

## STATISTICAL INFROMATION IN RESPECT OF LEGAL AID BENEFICIARIES.

| Sl.No | Year | SC | ST | Women | Others | Total |
|---|---|---|---|---|---|---|
| 01 | 2020 | 278 | 96 | 691 | 1698 | 2763 |
| 02 | 2021 | 427 | 146 | 1156 | 2572 | 4301 |
| 03 | 2022 | 639 | 187 | 2176 | 4346 | 7348 |
| 04 | 2023 (Jan 2023 to May 2023) | 312 | 103 | 977 | 2046 | 3438 |
| **Total** | | **1656** | **532** | **5000** | **10662** | **17850** |